mill owner and the authorities the officials, naturally they have to seal the mill. That is the situation created. In regard to the second charge he has made is that the police officials have raided two mills on one day and another mill on 10th. The police officers, according to their convenience, have raided. When they came to know that there is some discrepency in the mill of Dhanalakshmi rice mills, they have raided on 10-8-1983.

SRI R.S. MANE.—According to the police procedure they prepare a panchanama, they prepare a list of stock that came to their notice and they prepare everything that was noticed in the panchanama in the raid. Then what further necessity is there to close the rice mills ?

MR. DEPUTY SPEAKER.—If the police people have committed any illegality or any irregularity it should be questionned in a court of law.

SRI R. S. MANE.—The poor farmers are affected because of the closure of the mills.

MR. DEPUTY SPEAKER.—If any particular party is affected there are other forums and methods to redress his grievance in a court of law.

(ii) about the growing of Encalyptus trees and the hardship caused to ryots thereby.

SRI H. NAGAN GOUDA.—I call attention of the Minister of State for Forest to the statement made by a Scientist about the growing of Eucalyptus trees and the hardship caused to ryots thereby.

SRI B.A. JIVIJAYA.—(Minister of State for Forest) Sir, I would like to make the following statement.

ಸದಸ್ಯರು ಶ್ರೀ ಸುಂದರಲಾಲ ಬಹುಗುಣ ಅವರ ಹೇಳಿಕೆ ಆಧಾರದ ಮೇಲೆ ಕೇಳಲಾದ ಗಮನ ಸೆಳೆಯುವ ಸೂಚನೆಯಲ್ಲಿ ನೀಲಗಿರಿ ಮರಗಳು ಮಣ್ಣಿನ ಫಲವತ್ತತೆಯನ್ನು ಹೀರುತ್ತದೆ ಮಂತ್ತು ಸುತ್ತಮುತ್ತಲಿನ ಜಲಮೂಲಗಳಿಗೆ ಭಾದಕವಾಗುವುದರಿಂದ ಬಳ್ಳಾರಿ ಜಿಲ್ಲೆಯಲ್ಲಿ ರೈತರು ನೀಲಗಿರಿ ಮರಗಳನ್ನು ಬೆಳೆಸುವ ಬಗ್ಗೆ ರೈತ ಸಂಘದವರು ಕಳವಳ ವ್ಯಕ್ತಪಡಿಸಿರುತ್ತಾರೆಂದು ತಿಳಿಸಿರುತ್ತಾರೆ.

ನೀಲಗಿರಿ ಮರಗಳು ಮೇಲೆ ಹೇಳಿದ ಎರಡು ವಿಷಯಗಳಿಗೂ ತೊಂದರೆ ಮಾಡುತ್ತದೆಂಬುಕ್ಕೆ ಯಾವ ವೈಜ್ಞಾನಿಕ ಆಧಾರವೂ ಇಲ್ಲ. ೧೦೮ ದೇಶಗಳಲ್ಲಿ ನೀಲಗಿರಿಯನ್ನು ಬೆಳೆಯುತ್ತಿದ್ದಾರೆ. ಹಲವಾರು ದೇಶಗಳಲ್ಲಿ ೧೦೦ ವರ್ಷಗಳಿಗಿಂತಲೂ ಹೆಚ್ಚಿನ ಸಮಯದಿಂದ ನೀಲಗಿರಿ ಮರಗಳನ್ನು ಬೆಳೆಸುತ್ತಿದ್ದು ಅಲ್ಲಿ ಯಾವ ತೊಂದರೆಯೂ ಆಗಿಲ್ಲ. ಭಾರತ, ಆಸ್ಟ್ರೇಲಿಯ, ಇಟಲಿ ಮತ್ತು ಇಸ್ರೇಲ್ ದೇಶಗಳಲ್ಲಿ ನಡೆಸಿದ ಸಂಶೋಧನೆಗಳಿಂದ ನೀಲಗಿರಿ ಮರವು ಜಲಮೂಲಗಳನ್ನು ಬೂಮಿಯಲ್ಲಿ ತಗ್ಗಿಸುತ್ತದೆಂಬ ವಾದಕ್ಕೆ ಯಾವ ಆಧಾರವೂ ಸಿಕ್ಕಿಲ್ಲ. ಆಸ್ಟ್ರೇಲಿಯಾ ದೇಶದಲ್ಲಿ ಬೇರೆ ಜಾತಿಯ ಮರಗಳ ಅರಣ್ಯಗಳನ್ನು ನೀಲಗಿರಿ ಸಸ್ಯ ವರ್ಗಕ್ಕೆ ಪರಿವರ್ತಿಸಿ ಜಲಾನಯನ ಪ್ರದೇಶಗಳನ್ನು ನಿರ್ವಹಿಸುತ್ತಿದ್ದಾರೆ.

ಈ ವಿಚಾರವನ್ನು ದೃಢೀಕರಿಸಲು ತಮಿಳುನಾಡು ಸರ್ಕಾರವು ಉನ್ನತ ಮಟ್ಟದ ಸಮಿತಿಯನ್ನು ರಚಿಸಿ ನೀಲಗಿರಿ ಬೆಟ್ಟದಲ್ಲಿ ಬೆಳೆಸಿದ ನೀಲಗಿರಿ ಮರಗಳ ತೊಂದರೆಗಳ ಬಗ್ಗೆಯೂ, ಆಸ್ಟ್ರೇಲಿಯಾದಲ್ಲಿ

ಗುತೇಗ ಪ್ರದೇಶದಲ್ಲಿ ನಡೆಸಿದ ಪ್ರಯೋಗಗಳಿಂದಲೂ, ಇಸ್ರೇಲಿನಲ್ಲಿ ಹಿ'ತ್ ಮತ್ತು ಕಾರ್‌ಸ್ಟೂನ್ ನಡೆಸಿದ ಪ್ರಯೋಗಗಳಿಂದಲೂ, ಉದಕಮಂಡಲದಲ್ಲಿ ಥೋಮಸ್, ಚಂದ್ರಶೇಖರ್ ಮತ್ತು ಹಾಲ್-ದೊರೈರವರು ನಡೆಸಿದ ಅಭ್ಯಾಸಗಳಿಂದಲೂ, ಡೆಹರಾಡೂನ್‌ನಲ್ಲಿ ಜಾರ್ಜ್‌ರವರು ನಡೆಸಿದ ಕ್ಷೇತ್ರ ಪರೀಕ್ಷೆಯಿಂದಲೂ, ಬಂಗಾಲದಲ್ಲಿ ರೇ ರವರು ನಡೆಸಿದ ಪರೀಕ್ಷೆಯಿಂದಲೂ ಮತ್ತೆ ಪುನ: ದಬ್ಯಾಲ್‌ರವರು ಡೆಹ್ರಾಡೂನ್‌ನಲ್ಲೂ ಹಾಗೂ ಇನ್ನಿತರರು ಇಟಲಿಯಲ್ಲಿ ನಡೆಸಿದ ಅಭ್ಯಾಸಗಳಿಂದಲೂ, ಕೇಂದ್ರೀಯ ಮಣ್ಣು ಮತ್ತು ನೀರು ಸಂರಕ್ಷಣೆ ಸಂಶೋಧನಾ ಸಂಸ್ಥೆ ಮತ್ತು ತರಬೇತಿ ಕೇಂದ್ರದವರಾದ ಸಮರಾಜ್, ತಿವಾರಿ, ಹಾಲ್‌ದೊರೈ ಮತ್ತು ಚಂದ್ರನ್ ಅವರು ನಡೆಸಿದ ವೈಜ್ಞಾನಿಕ ಶೋಧನೆಗಳಿಂದಲೂ, ತರಾಯಿ ದೇಶದಲ್ಲಿ ಪ್ರತಾಪ್ ನರೈನ್ ನಡೆಸಿದ ಕೆಲಸಗಳಿಂದಲೂ ಡೆಹ್ರಾಡೂನ್‌ನಲ್ಲಿ ಹೆಚ್. ಎನ್ ಮುಂಥೂರ್ ರವರು ನಡೆಸಿದ ಕೆಲಸಗಳಿಂದಲೂ, ಕೇಂದ್ರಿಯ ಏರಿಡ್ ಜೋನ್ ಸಂಶೋಧನಾ ಕೇಂದ್ರದಲ್ಲಿ ಕಾಪ್ಟನ್, ವಸಿಯೆಲ್ಲಾ ಮತ್ತು ಐಸಾಕ್‌ರವರು ನಡೆಸಿದ ಸಂಶೋಧನೆಯಿಂದಲೂ, ಭಾರತೀಯ ಅರಣ್ಯ ಸಂಶೋಧನಾ ಕೇಂದ್ರದವರಾದ ಆರ್. ಸಿ. ಘೋಷ್‌ಕೌಲ್ ಮತ್ತು ಸುಬ್ಬರಾವ್‌ರವರು ನಡೆಸಿದ ಅಭ್ಯಾಸಗಳಿಂದಲೂ ಹಾಗೂ ಅಹಮದಾಬಾದ್‌ನಲ್ಲಿರುವ ಭಾರತೀಯ ಮೆನೇಜ್‌ಮೆಂಟ್ ಸಂಸ್ಥೆಯ ತೀರ್ಥಗುಪ್ತರವರು ನಡೆಸಿದ ಸಂಶೋಧನೆಗಳಿಂದ ಹಾಗೂ ಇನೂ ಕೆಲವು ವಿಜ್ಞಾನಿಗಳು ಹಾಗೂ ಸಂಸ್ಥೆಯವರು ನಡೆಸಿರುವ ಸಂಶೋಧನೆಗಳಿಂದ ದೃಡಪಟ್ಟಿರುವ ವಿಚಾರಗಳೆಂದರೆ.

(ಅ) ಭಾರತದಲ್ಲಿ ಬೆಳಸಲಾಗುತ್ತಿರುವ ನೀಲಗಿರಿ ಮರದ ಪ್ರಭೇಧಗಳಿಂದ ಭೂ ಜಲಮಟ್ಟ ನಶಿಸುತ್ತಿಲ್ಲ.

(ಆ) ನೀಲಗಿರಿ ಮರಗಳಿಂದ ನೆಡು ತೋಪುಗಳಲ್ಲಿನ ಮಣ್ಣಿನ ನೀರು ಹೀರುವಿಕೆಯ ಶಕ್ತಿ ಹೆಚ್ಚಿ ಆಧಿಕ ನೀರು ಮಣ್ಣಿನಲ್ಲಿ ಸೇರಿ ಮಣ್ಣು ವಿಕಸನ ಹೊಂದುತ್ತದೆ ಹಾಗೂ ಭೂ ಜಲಮಟ್ಟ ವೃದ್ಧಿಯಾಗುತ್ತದೆ.

(ಇ) ನೀಲಗಿರಿ ನೆಡುತೋಪುಗಳಿಂದಾವೃತವಾದ ಜಲಾನಯನ ಪ್ರದೇಶದಲ್ಲಿರುವ ಜಲಾಶಯದ ಆಯುಷ್ಯ ಪ್ರಮಾಣ ಹೆಚ್ಚುತ್ತದೆ. ಮತ್ತು

(ಈ) ನೀಲಗಿರಿ ಮರ ಬೆಳೆದಿರುವ ಪ್ರದೇಶದಲ್ಲಿ ತೇವಾಂಶ ಹೆಚ್ಚಾಗಿ ಹಿತಕರವು ಆಗುತ್ತದೆ.

ಇವುಗಳೂ ಅಲ್ಲದೆ ಇತರ ಸಂಶೋಧನೆಗಳು ನೀಲಗಿರಿ ಮರದ ಬಗ್ಗೆ ಕೆಳಕಂಡ ವಿಷಯಗಳನ್ನು ದೃಢಪಡಿಸಿವೆ.

(ಅ) ನೀಲಗಿರಿ ಮರಗಳ ಕೆಳಗೆ ಜೀನ್ಯಾಗಿ ಬೆಳೆದಿರುವ ಸಸ್ಯವರ್ಗ ಮತ್ತು ಹುಲ್ಲು ಕಂಡು ಬರುತ್ತದೆ (ಅತಿ ಒತ್ತಾಗಿ ನೆಟ್ಟಾಗ ಸೂರ್ಯನ ಬೆಳಕು ಭೂಮಿಗೆ ಬೀಳದೆ ಏನೂ ಬೆಳೆಯುವುದಿಲ್ಲ. ಈ ರೀತಿಯಾಗಿ ಯಾವ ಸಸ್ಯವನ್ನೂ ಒತ್ತಾಗಿ ಬೆಳಸಿದಾಗ ಅದರ ಕೆಳಗಡೆ ಏನೂ ಬೆಳೆಯುವುದಿಲ್ಲ.

(ಆ) ಮಣ್ಣಿನ ಫಲವತ್ತತೆಯ ಚಕ್ರ ಚಲನೆಯಿಂದ ಮಣ್ಣು ಹೆಚ್ಚಾಗಿ ಫಲವತ್ತಾಗುತ್ತದೆ.

(ಇ) ನೀಲಗಿರಿ ಮರವು ಕಡಿಮೆ ಪ್ರಮಾಣದಲ್ಲಿ ನೀಕನ್ನು ಉಪಯೋಗಿಸಿಕೊಂಡು ಹೆಚ್ಚು ಮರದ ಇಳುವರಿಯನ್ನು ಕೊಡುತ್ತದೆ (ಕಡಲೆಕಾಯಿ ಬೆಳೆಯು ನೀಲಗಿರಿ ಮರದ ಎರಡರಷ್ಟು ತೇವಾಂಶವನ್ನು ಹೀರುತ್ತದೆ) ಮತ್ತು

(ಈ) ನೀಲಗಿರಿ ಮರವು ಮಣ್ಣಿನ ತಳಪದರದಲ್ಲಿನ ನೀರು ಹೀರಿಕೊಂಡು ಇದರ ಕೆಳಗೆ ಬೆಳೆಸುವ ಸಸ್ಯ ವರ್ಗ ಹಾಗೂ ಇತರ ಕಡಿಮೆ ಸಮಯದಲ್ಲಿ ಬೆಳೆಯುವ ಕೃಷಿ ಉತ್ಪನ್ನಗಳಿಗೆ ಮೇಲ್ಪದರಿನ ನೀರನ್ನು ಒದಗಿಸುತ್ತದೆ.

ಭೂಮಿಯಲ್ಲಿ ಭೂಜಲಮಟ್ಟ ಕಡಿಮೆಯಾದುದು ಪ್ರಪಂಚದ ಎಲ್ಲಾ ಭಾಗಗಳಲ್ಲಿ ಹಾಗೂ ನಮ್ಮ ದೇಶದ ಕೆಲವಡೆಗಳಲ್ಲಿ ಕಂಡುಬಂದಿದೆ. ಇದಕ್ಕೆ ಕಾರಣ ಭೂಮಿಯ ಮೇಲಿರುವ ಸಸ್ಯಕಾಶಿಗಳ ನಾಶ. ಮಳೆ ಆಧಾರಿತ ಶುಷ್ಕ ಕೃಷಿ ಉತ್ಪನ್ನಕ್ಕಾಗಿ ಮಾಡಿದ ಸಸ್ಯವರ್ಗದ ನಾಶದಿಂದಾಗಿ ಭೂಮಿಗೆ (ಮಣ್ಣಿಗೆ) ನೀರನ್ನು ಹೀರುವ ಶಕ್ತಿ ಕಡಿಮೆಯಾಗುತ್ತಿದೆ. ಇದರ ಜೊತೆಗೆ ಕೃಷಿಗಾಗಿ ನೀರನ್ನು ಪಡೆಯಲು ತೋಡಲಾಗುತ್ತಿರುವ ನೀರಾವರಿ ಬಾವಿ ಹಾಗೂ ಕೊಳವೆ ಬಾವಿಗಳಿಂದ ಭೂಜಲಮಟ್ಟ ಕುಸಿಯುತ್ತಿದೆ.

ಈಗ ಕೆಲವರು ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಮಾರಸಂದ್ರ ಪ್ರದೇಶವನ್ನು ಭೂಜಲ ಇಳಿದುದಕ್ಕಾಗಿ ಉದಾಹರಿಸುತ್ತಿದ್ದಾರೆ. ಇದಕ್ಕೆ ಕಾರಣ ನೀಲಗಿರಿ ಮರವೆಂದು ಆಪಾದಿಸುತ್ತಾರೆ. ಹೊಸಕೋಟೆ ಮತ್ತು ದೇವನಹಳ್ಳಿ ತಾಲ್ಲೂಕುಗಳಲ್ಲಿ ನೀಲಗಿರಿ ಮರಗಳನ್ನು ಹೆಚ್ಚಾಗಿ ಬೆಳೆಸಿದುದು ನಿಜ. ಆದರೆ ಭೂಜಲ ಮಟ್ಟ ಇಳಿದುದಕ್ಕೆ ಬೇರೇ ಕಾರಣಗಳೇ ಇವೆ. ೧೯೭೯ರಲ್ಲಿ ಭೂಜಲದ ಉಪಯೋಗ ದೇವನಹಳ್ಳಿ ತಾಲ್ಲೂಕಿನಲ್ಲಿ ಶೇಕಡಾ ೭೯ ಆಗಿಯೂ, ಹೊಸಕೋಟೆ ತಾಲ್ಲೂಕಿನಲ್ಲಿ ಶೇಕಡಾ ೬೭ ಆಗಿಯೂ ಇತ್ತು. ಹೊಸಕೋಟೆ ತಾಲ್ಲೂಕಿನಲ್ಲಿ ೩೦-೬-೧೯೭೯ರಲ್ಲಿ ಶಕ್ತಿವರ್ಧಕ ನೀರೆತ್ತುವ ಬಾವಿಗಳು ೪೨೯೨ ಇದ್ದುದ್ದು, ೩೧-೩-೧೯೮೨ರಲ್ಲಿ ೮೩೮೯ ಆಗಿತ್ತು. ದೇವನಹಳ್ಳಿ ತಾಲ್ಲೂಕಿನಲ್ಲಿ ೩೦-೬-೧೯೭೯ರಲ್ಲಿ ಶಕ್ತಿವರ್ಧಕ ನೀರೆತ್ತುವ ಬಾವಿಗಳು ೩೧೧೦ ಇದ್ದುದು ೩೧-೩-೧೯೮೨ರಲ್ಲಿ ೭೬೪೮ ಆಗಿದೆ. ಈ ಎರಡು ತಾಲ್ಲೂಕುಗಳಲ್ಲಿ ೩೦-೬-೧೯೭೯ ರಲ್ಲಿದ್ದುದಕ್ಕಿಂತ ೩೧-೩-೧೯೮೨ರಲ್ಲಿ ನೀರೆತ್ತುವ ಬಾವಿಗಳು ಎರಡುಪಟ್ಟು ಹೆಚ್ಚಾಗಿದೆ. ಆದರೆ ಇಲ್ಲಿ ಉಳಿದ ಅಂತರ್‌ಜಲದ ಪ್ರಮಾಣ ಶೇಕಡಾ ೨೧ ದೇವಹಳ್ಳಿಯಲ್ಲೂ ಮತ್ತು ಶೇಕಡಾ ೩೩ ಹೊಸಕೋಟೆಯಲ್ಲಿ ಮಾತ್ರ ಇತ್ತು. ಈ ತಾಲ್ಲೂಕುಗಳಲ್ಲಿ ಅಂತರ್‌ಜಲ ವೃದ್ಧಿಯಾಗುವುದಕ್ಕಿಂತ ಬಾವಿಗಳ ಮೂಲಕ ಹೊರಗೆ ತೆಗೆಯುತ್ತಿರುವ ಜಲವು ಜಾಸ್ತಿಯಾಗಿದೆ. ಆದುದರಿಂದ ಭೂ ಜಲಮಟ್ಟ ಕುಸಿಯುತ್ತಿದೆ.

ನೀಲಗಿರಿ ಮರದ ಬಗ್ಗೆ ಈ ಸಂಗತಿಗಳನ್ನು ವಿವರಪೂರ್ವಕವಾಗಿ ಪರಿಶೀಲಿಸಬೇಕಾಗಿದೆ. ಕೆಲವು ನೀಲಗಿರಿ ಪ್ರಭೇದಗಳು (ಇ. ರೊಸ್ಟ್ರಾಟಾ, ಇ. ರೂಡಿಸ್) ಆವುಗಳ ಬೇರು ೧೦೦ ಮೀಟರ್‌ಗೂ ಹೆಚ್ಚು ಹೋಗಿ ಭೂಜಲವನ್ನು ಹೀರಿಕೊಳ್ಳುವ ಶಕ್ತಿ ಹೊಂದಿದೆ. ಇವುಗಳನ್ನು ಜೌಗು ಪ್ರದೇಶಗಳನ್ನು ಒಣಗಿಸಲು ಕೆಲವು ದೇಶಗಳಲ್ಲಿ ಬೆಳೆಸುತ್ತಾರೆ. ಆದರೆ ನಮ್ಮ ದೇಶದಲ್ಲಿ ಬೆಳೆಸುತ್ತಿರುವ ನೀಲಗಿರಿ ಮರಗಳು ಇ.ಹೈಬ್ರಿಡ್, ಇ.ಟಿರಿಟಿಕಾರ್ನಿಸ್, ಇ.ಕಮಾಲ್‌ಡ್ಯುಲೆಸ್‌ನಿಸ್, ಇ.ಗ್ಲಾಬುಲಸ್, ಸಿಟ್ರಿಯಡೋರ. ಇವುಗಳು ಬೇರೆಯಾಗಿದ್ದು, ಅವುಗಳ ಬೇರುಗಳು ಭೂಮಿಯಲ್ಲಿ ೩ ರಿಂದ ೪ ಮೀ.ಗೂ ಹೆಚ್ಚು ಆಳಕ್ಕೆ ಹೋಗುವುದಿಲ್ಲ.

ಈಗ ನಮ್ಮ ರಾಜ್ಯದಲ್ಲಿ ಆಗುತ್ತಿರುವ ತೊಂದರೆಗಳೆಂದರೆ, ಸೌದೆ ಹಾಗೂ ಸಣ್ಣ ಮರಮುಟ್ಟುಗಳಿಗೆ ಹಾಹಾಕಾರ. ವಾರ್ಷಿಕ ಬೇಡಿಕೆಯಾದ ೮೦ ಲಕ್ಷ ಟನ್ನುಗಳಲ್ಲಿ, ಕಾದಿರಿಸಿದ ಅರಣ್ಯಗಳಿಂದ ಪೂರೈಕೆಯಾಗುತ್ತಿರುವುದು ಕೇವಲ ೪೦ ಲಕ್ಷ ಟನ್ನುಗಳು. ಉಳಿದ ಮೊತ್ತವು ರೆವಿನ್ಯೂ ಭೂಮಿ, ಜಿಲ್ಲಾ ಕಾಡುಗಳು, ವರ್ಗೀಕರಿಸದ ಹಾಗೂ ವರ್ಗೀಕರಣವಾದ ಬಂಜರು ಭೂಮಿ, ಸೌಲಭ್ಯಗಳನ್ನು ಹೊಂದಿರುವ ಬಾಣೆ ಬೆಟ್ಟ ಕುಮ್ಕಿ ಸೊಪ್ಪಿನ ಬೆಟ್ಟ. ಇತ್ಯಾದಿ ಮತ್ತು ಖಾಸಗಿ ಹಿಡುವಳಿಗಳಿಂದ ಪೂರೈಕೆಯಾಗುತ್ತಿದೆ. ಈ ಅರಣ್ಯಗಳಿಗೆ ಯಾವ ಹೆಚ್ಚಿನ ರಕ್ಷಣೆ ಮತ್ತು ಪೋಷಣೆ ಇಲ್ಲದೆ, ಇವುಗಳಲ್ಲಿ ಸಿಗುವ ಮರ ಮಂಟುಪ್ಪಗಳ ಇಳುವರಿ ಕಡಿಮೆಯಾಗುತ್ತಿದೆ. ಮೇಲಾಗಿ ೧೯೫೩ನೇ ಇಸವಿಯಲ್ಲಿ ಸರಬರಾಜು ಮಾಡಬೇಕಾದ ಬೇಡಿಕೆಯ ಅಂದಾಜು ಸುಮಾರು ೧೩೫ ಲಕ್ಷ ಟನ್ನುಗಳು. ಈ ಎಲ್ಲ ವಿಚಾರಗಳನ್ನು ಪರಿಶೀಲಿಸಿದರೆ ನಾವುಗಳು ಅತಿ ಹೆಚ್ಚಿನ ಪ್ರಮಾಣದಲ್ಲಿ ಮರ ನೆಡುವ ಕಾರ್ಯಕ್ರಮವನ್ನು ಸರ್ಕಾರಿ ಹಾಗೂ ಖಾಸಗಿ ವಲಯದಲ್ಲಿ ಸಾಮಾಜಿಕ ವನ ನಿರ್ಮಾಣ ಮೂಲಕ ಬೆಳೆಸಬೇಕಾಗಿದೆ.

ನಾಟಾ ಮತ್ತು ಉರುವಲು ಕಟ್ಟಿಗೆ ಬೆಳೆಸುವ ಕಾರ್ಯಕ್ಕೆ ಯೋಗ್ಯವಾದ ಸಸ್ಯವು ಈ ಗುಣಗಳನ್ನು ಹೊಂದಿರಬೇಕು.

೧) ಅತಿ ಶೀಘ್ರವಾಗಿ ಬೆಳೆಯಬೇಕು.

೨) ಜಾನುವಾರುಗಳು ಮೇಯ್ದುಂತಿರಬಾರದು.

೩) ಒಣ ವಾತಾವರಣದಲ್ಲಿ ಬದುಕುವ ಶಕ್ತಿಯನ್ನು ಹೊಂದಿರಬೇಕು.

೪) ಬೆಂಕಿಯಿಂದ ಸುಟ್ಟರೂ ಬದುಕುವ ಶಕ್ತಿ ಇರಬೇಕು.

೫) ಕಡಿದಾಗ ಬುಡದಿಂದ ಚಿಗುರೊಡೆದು, ಬೆಳೆದು ಮರವಾಗುವ ಶಕ್ತಿ ಹೊಂದಿರಬೇಕು.

೬) ಸೌದೆಯಾಗಿ ಉಪಯೋಗಿಸಿದಾಗ ಹೆಚ್ಚಿನ ಉಷ್ಣತೆಯನ್ನು ಕೊಡಬೇಕು.

ನೀಲಗಿರಿ ಮರವು ಈ ಎಲ್ಲಾ ವಿಶೇಷ ಗುಣಗಳನ್ನು ಹೊಂದಿದ್ದು, ೨೦ ಇಂಚಿನಿಂದ ೫೦ ಇಂಚು ಮಳೆ ಬೀಳುವ ಪ್ರದೇಶದಲ್ಲಿ ಚೆನ್ನಾಗಿ ಬೆಳೆಯುತ್ತದೆ. ಆದ್ದರಿಂದ ಅದರಲ್ಲೂ ಸಾಧಾರಣ ಮಳೆಬೀಳುವ ಪ್ರದೇಶವಾದ ಬಳ್ಳಾರಿ ಜಿಲ್ಲೆ ರೈತರು ನೀಲಗಿರಿ ಮರಗಳನ್ನು ಬೆಳೆಸುವ ಬಗ್ಗೆ ಭಯಪಡಬೇಕಾದ ಅವಶ್ಯಕತೆ ಇಲ್ಲ.

2-00 P. M.

† ಶ್ರೀ ಹೆಚ್. ವಾಗನಗೌಡ (ಕರಂಗೋಡು).— ಮಾನ್ಯ ಅಧ್ಯಕ್ಷರೆ, ನಾನು ಫಾರೆಸ್ಟ್ ಸೈಂಟಿಸ್ಟ್ ಅಲ್ಲ, ಆಗ್ರಿಕಲ್ಚರಲ್ ಸೈಂಟಿಸ್ಟ್ ಅಲ್ಲ. ಅವರು ಪರಿಸರ ತಜ್ಞರು ಎನ್ನುವ ಭಾವನೆಯಿಂದ ವಿಜ್ಞಾನಿ ಎನ್ನುವ ಶಬ್ದವನ್ನು ನಾನು ಉಪಯೋಗಿಸಿದ್ದೇನೆ. ಆದರೆ ತಜ್ಞರಾದ ಸುಂದರ್ ಬಹುಗುಣರವರು ಹೇಳುತ್ತಾರೆ. ಪಕ್ಷಗಳ ಆಶ್ರಯ. ದನಗಳಿಗೆ ಮೇವು, ಬಡವರ ಅನ್ನ, ಕೃಷಿ ಕಾರ್ಮಿಕರ ಉದ್ಯೋಗವನ್ನು ಕಂಗೆಡಿಸುವ ಕೀರ್ತಿ ಈ ನೀಲಗಿರಿ ಮರಗಳಿಗೆ ಇದೆ ಎನ್ನುವ ಭಾವನೆಯಿಂದ ಅವರು ಹೇಳಿದ್ದಾರೆ. ಈಗ ನಾನು ಎರಡೆರಡು ಸಮಸ್ಯೆಗಳನ್ನು ತಮ್ಮ ಮುಂದೆ ಮಂಡಿಸಬಯಸುತ್ತೇನೆ. ಈಗ ತಾವು ಹೇಳಿದಿರಿ, ವಿದೇಶಗಳಲ್ಲಿರತಕ್ಕ ಥ ರಿಪೋರ್ಟ್‌ಗಳ ಮೇಲೆ, ಮತ್ತಿತರ ರಾಜ್ಯದಲ್ಲಿ ಮಾಡಿರತಕ್ಕ ಸಮೀಕ್ಷೆಯ ಮೇಲೆ ಇರತಕ್ಕ ತೊಂದರೆಗಳನ್ನು ಹೇಳಿದಿರಿ. ಈಗ ತಾವೂ ಕೂಡ ಒಂದು ಉನ್ನತ ಮಟ್ಟದ ಸಮಿತಿಯನ್ನು ನೇಮಕ ಮಾಡಿದ್ದೀರಿ. ಕ್ಲೈಮೇಟ್ ಕಂಡೀಷನ್ಸ್ ಮೇಲೆ ಅಥವಾ ಅಲ್ಲಿರತಕ್ಕ ಭೂಮಿಯ ಗುಣದ ಮೇಲೆ, ಬೆಳೆಯಂತಕ್ಕ ಬೆಳವಣಿಗೆಯ ಮೇಲೆ ಹೆಚ್ಚು ಕಮ್ಮಿ ಆಗಲಿಕ್ಕೆ ಅಥವಾ ವಿಜ್ಞಾನಿಗಳು ಹೇಳತಕ್ಕ ಭಾವನೆಯ ಮೇಲೆ ಇಂಥ ಪರಿಸ್ಥಿತಿ ಇದೆ ಎನ್ನುವ ಭಾವನೆ ರೈತರಲ್ಲಿ ಇದೆ. ಇನ್ನೂ ಸ್ವಲ್ಪ ಹೆಚ್ಚಿಗೆ ಹೇಳಬೇಕೆಂದರೆ ಕೋಲಾರ ಮತ್ತು ತುಮಕೂರು ಜಿಲ್ಲೆ ೧೦ ಲಕ್ಷಕ್ಕೂ ಹೆಚ್ಚಿನ ಗಿಡಗಳನ್ನು ಕೆತ್ತಿದ್ದಾರೆಂದು ಪತ್ರಿಕೆಯಲ್ಲಿ ವರದಿಯಾಗಿದೆ. ಇದರಿಂದಾಗಿ ಈ ಸಂಶಯ ಬಲವಾಗಲು ಕಾರಣವಾಗಿದೆ ಎಂದು ನಾನು ಹೇಳಬಯಸುತ್ತೇನೆ. ಇವತ್ತು ಸಂಬಾಬೂಲ್ ಗಿಡವನ್ನು ದನಗಳು ಮೇಯುತ್ತವೆ ಎನ್ನುವುದು ಒಂದನ್ನು ಬಿಟ್ಟರೆ ಇದು ನೀಲಗಿರಿ ಮರಕ್ಕೆ ಸರಿಸಮಾನವಾಗಿ ಬೆಳೆಯುತ್ತದೆ. ಆದ್ದರಿಂದ ರೈತರು ಈ ಸಂಬಾಬೂಲ್‌ನ್ನು ಹೆಚ್ಚು ಹೆಚ್ಚು ಬೆಳೆಯಂತೆ ಸರ್ಕಾರದವರು ಪ್ರೋತ್ಸಾಹಿಸಬೇಕೆಂದು ನನ್ನ ಮನವಿ. ಇವತ್ತು ನಮ್ಮಲ್ಲಿ ಸೌದೆ ಮತ್ತು ಸಣ್ಣ ಸಣ್ಣ ಮರಮಟ್ಟುಗಳಿಗೆ ಹಾಹಾಕಾರ ಇದೆ ಆದ್ದರಿಂದ ಅದನ್ನು ನೀಗಿಸಲು ಇದನ್ನು ಬೆಳೆಸುತ್ತಿದ್ದೆವೆಂದು ತಾವು ಹೇಳಿದಿರಿ. ಆದರೆ ಈ ಮರವನ್ನು ಇಂಡಸ್ಟ್ರೀಸ್‌ಗೆ ರಾ ಮೆಟೀರಿಯಲ್ ಆಗಿ ಇವರು ಉಪಯೋಗಿಸುತ್ತಿದ್ದಾರೆ. ಕೇವಲ ನಮ್ಮ ಕಣ್ಣೊರೆಸುವ ಸಲುವಾಗಿ ಈ ರೀತಿ ಹೇಳುತ್ತಿದ್ದಾರೆಂದು ರೈತರಲ್ಲಿ ಅಭಿಪ್ರಾಯ ಬಂದಿದೆ. ಸ್ವಾಮಿ, ಆಸ್ಟ್ರೇಲಿಯಾದಲ್ಲಿ ೧೦೦ ಅಡಿಗೂ ಕಳಗೆ ಹೋಗತಕ್ಕ ನೀಲಗಿರಿ ಮರಗಳನ್ನು ಬೆಳೆಸಿದ್ದಾರೆಂದು ತಾವು ಹೇಳಿದಿರಿ ನಮ್ಮ ತುಂಗಭದ್ರಾ ಕಮ್ಯಾಂಡ್ ಏರಿಯಾದಲ್ಲಿ ೩೦ ಸಾವಿರ ಹೆಕ್ಟೇರ್ ಜಮೀನು ಇರುವುದರಿಂದ ಅಲ್ಲಿ ಸೀಪೇಜ್ ನೀರಿನಲ್ಲಿ ಇದನ್ನು ಬೆಳೆಸಬಹುದೆಂದು ಅನಿಸುತ್ತದೆ. ಆದ್ದರಿಂದ ಪಂತ್ತೊಮ್ಮೆ ನಾನು ತಪಗೆ ಒತ್ತಾಯ ಮಾಡುತ್ತೇನೆ, ತಾವು ಏರಿಯಾವೈಸ್ ಉನ್ನತ ಮಟ್ಟದ ಸಮಿತಿ ಯನ್ನು ಮಾಡಿ ಇಲ್ಲಿಯೂ ಕೂಡ ಒಂದು ರೀಸರ್ಚ್ ಆಗಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಮಾನ್ಯ ಅಧ್ಯಕ್ಷರೇ, ಮಾನ್ಯ ಅರಣ್ಯ ಖಾತೆ ಸಚಿವರು ಒಂದು ಧೀರ್ಘವಾದ ವರದಿಯನ್ನೇ ಸರ್ಕಾರಕ್ಕೆ ಒಪ್ಪಿಸಿದ್ದಾರೆ.

ಶ್ರೀ ಜೀವಿಜಯ.— ತಮಗೆ ಸಂಶಯ ನಿವಾರಣೆ ಆಗಲಿ ಎಂದು ಕೊಟ್ಟಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.— ನಮಗೆ ಸಂಶಯ ನಿವಾರಣೆ ಆಗುತ್ತದೋ ಇಲ್ಲವೋ ಅದು ಬೇರೆ ಆದರೆ ತಾವು ನಮಗೆ ಏನೊಂದು ವರದಿಯನ್ನು ಒಪ್ಪಿಸಿದ್ದೀರಿ ಅದಕ್ಕೆ ಸಂತೋಷ. ನಿಮ್ಮ ಸ್ಪೀಚ್‌ಮೆಂಟ್ ನಮಗೆ ಬೇಕಿಲ್ಲವೆಂದು ಹೇಳುವ ಮನಸಿದ್ದರೆ ಕೇವಲ ಎರೆಡೇ ಮಾತಿನಲ್ಲಿ ನೀವು ಹೇಳಿರುವುದು ಯಾವುದೂ ನಿಜವಲ್ಲ ಎಂದು ಹೇಳಿಬಿಡಬಹುದು. ಆದರೆ ಇರತಕ್ಕ ವಾಡಿಕೆ, ಆದರೆ ಇಲ್ಲಿ ತಾವು ಒಂದು ಧೀರ್ಘವಾದ ವರದಿಯನ್ನು ಕೊಟ್ಟಿರುವುದನ್ನು ನೋಡಿದರೆ ಬಹಳ ಸಂತೋಷವಾಗುತ್ತದೆ. ಸುಂದರ್‌ಲಾಲ್ ಬಹುಗುಣ ಅವರು ಸೈಂಟಿಸ್ಟೇ ಅಲ್ಲ ಎಂದು ತಾವು ಇಲ್ಲಿ ಹೇಳಿದ್ದೀರಿ. ಆದರೆ ನಮಗೆ ತಿಳಿದು ಬಂದಿರುವ ಪ್ರಕಾರ, ತಮಗೂ ಗೊತ್ತಿರುವಂತೆ ಇವರು ದೇಶದಲ್ಲೆಲ್ಲಾ ಚಿಪ್ಕೋ ಮೂವ್‌ಮೆಂಟ್ ಎಂದು ಒಂದು ದೊಡ್ಡ ಚಳುವಳಿಯನ್ನೆ ಪ್ರಾರಂಭ ಮಾಡಿದ್ದಾರೆ. ಕಾರಣ ಪರಿಸರ ಮಾಲಿನ್ಯ ಇರಬಾರದೆಂಬ ದೃಷ್ಟಿಯಿಂದ. ಎಲ್ಲ ಕಡೆಗಳಲ್ಲೂ ಮಂಗಗಿಡಗಳನ್ನು ಬೆಳೆಸಬೇಕು, ಒಳ್ಳೆಯ ವಾತಾವರಣವನ್ನುಂಟು ಮಾಡ

† ಈ ಚಿನ್ಹೆಯು ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಬೇಕೆಂಬುದೇ ಇವರ ಚಳುವಳಿಯ ಮೂಲ ಉದ್ದೇಶ. ಅಂಥ ಒಬ್ಬ ಮಹಾನುಭಾವರು ಈ ಮಾತನ್ನು ಹೇಳಿದ್ದಾರೆ. ಯಾರೋ ಒಬ್ಬ ಸಣ್ಣ ಮನುಷ್ಯ ಈ ಮಾತನ್ನು ಹೇಳಿರುವುದಲ್ಲ. ಆದರೆ ಅವರು ಸೈಂಟಿಸ್ಟ್ ಏನೂ ಅಲ್ಲ ಎಂದು ಮಾತನಾಡುವುದು ಸರಿಯಲ್ಲ. ಕೇವಲ ಅವರು ಮಾತ್ರ ಈ ಮಾತನ್ನು ಹೇಳಿಲ್ಲ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಪ್ರೊಫೇಸರ್ ಆಗಿರುವ ಶ್ರೀಮಾನ್ ಗಂಗೂಲಿಯವರೂ ಕೂಡ ಈ ನೀಲಗಿರಿ ಮರದ ಬಗ್ಗೆ ಅದೇ ಮಾತನ್ನು ಹೇಳಿದ್ದಾರೆ. ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದ ಮಾಜಿ ಮುಖ್ಯ ನ್ಯಾಯಾಧೀಶರಾದ ಶ್ರೀಮಾನ್ ಚಂದ್ರಶೇಖರ್‌ರವರ ಕೂಡ ಇದೇ ಮಾತನ್ನು ಹೇಳಿದ್ದಾರೆ. ನಮ್ಮ ರಾಜ್ಯದವರೇ ಆಗಿದ್ದು ಈಗ ಬೊಂಬಾಯಿಯಲ್ಲಿ ದೊಡ್ಡ ಸೈಂಟಿಸ್ಟ್ ಆಗಿರತಕ್ಕ ಪ್ರೊಫೆಸರ್ ಜಿ. ವಿ. ಕೃಷ್ಣಮೂರ್ತಿಯವರೂ ಇದನ್ನೇ ಹೇಳಿದ್ದಾರೆ. ಮಾಜಿ ವಿಧಾನಸಭಾ ಸದಸ್ಯರಾದ ಶ್ರೀ ಎಂ. ವಿ. ರಾಜಶೇಖರನ್‌ರವರೂ ಇದನ್ನೇ ಹೇಳಿದ್ದಾರೆ. ಮಾನ್ಯ ಎಂ. ವಿ. ರಾಜಶೇಖರನ್ ಎಕ್ಸ್ ಎಂ.ಎಲ್.ಎ. ಅವರು ಒಬ್ಬ ರಾಜಕಾರಣಿ ಮತ್ತೆ ಗಾಂಧಿ ಪೀಸ್ ಫೌಂಡೇಷನ್ ಸೆಕ್ರೆಟರಿ ಎಸ್. ನಾರಾಯಣ ಸ್ವಾಮಿ ಇನ್ನೂ ಇತರರು ಎಷ್ಟೋ ಜನ ಸೇರಿ, ಬರೀ ಸೈಂಟಿಸ್ಟ್ ಮಾತ್ರವೇ ಅಲ್ಲ ಸೈನ್‌ಟಿಸ್ಟ್, ಸೋಷಿಯಾಲಿಸ್ಟ್, ಪಾಲಿಟಿಷಿಯನ್ಸ್ ಎನ್‌ವರ್ನ್‌ಮೆಂಟಲ್ ಸೈನ್‌ಟಿಸ್ಟ್. ಅವರೆಲ್ಲರೂ ಸೇರಿ ಈವತ್ತು ಹೇಳಿರತಕ್ಕಂಥ ಒಂದು ಮಾತನ್ನು ಹೇಳಿದ್ದಾರೆ. ಅದರ ಪ್ರಕಾ,

ಉಪಾಧ್ಯಕ್ಷರು.— ಅಪರೇ ಬೆಳಿಸಿ ಅವರು ಅನುಭವಪಟ್ಟು ಹೇಳಿದ್ದಾರಾ ?

ಶ್ರೀ ಎಂ. ಎಸ್, ಕೃಷ್ಣನ್.— ಅವರೆಲ್ಲರೂ ರಿಸರ್ಚ್ ಮಾಡಿ ಹೇಳಿರುವುದು. ಶ್ರೀಮಾನ್ ಶ್ರೀಮಾನ್ ಬಹುಗುಣರವರು ಶ್ರೀಮಾನ್‌ಜೇವಿಜಯರವರು ಬೆಳಿಸಿ ಹೇಳಿರುವುದಲ್ಲ. ಈವತ್ತಿನ ದಿವಸ ಅಧಿಕಾರಿಗಳು ಬೆಳೆದು ಹೇಳಿರುವುದಲ್ಲ. ಅಷ್ಟಿಯ ಬಂಗಾಳದವರು ಅವರು ಬೆಳಿಸಿ ಹೇಳಿರುವುದನ್ನು ಇವರು ಹೇಳುತ್ತಿರುವುದು. ಇವರು ಬೆಳಿಸಿದ್ದಾರೋ ಏನೋ ನನಗಂತೂ ಗೊತ್ತಿಲ್ಲ, ನಾನಾಪರೂ ಬೆಳಿಸಿಲ್ಲ. ಓದಿ ತಿಳಿದು ಕೊಂಡಿರುವ ವಿಷಯ. ಈ ಎರಡು ಪ್ರಶ್ನೆಗಳಿಗೆ ಅದಕ್ಕೆ ಉತ್ತರವನ್ನು ಕೊಟ್ಟರೆ ವಾಸಿ ಸುಮ್ಮನಾಗುತ್ತೇನೆ. ಮೊದಲನೆಯದೆಂದರೆ, ಯುಕಲಿಪ್ಟಸ್ ಟ್ರೀ ನಮ್ಮ ರಾಜ್ಯದಲ್ಲಿ ಬಹಳ ಭಾಗದಲ್ಲಿ ಯಾರು ಈವತ್ತು ಪೇಪರ್ ಇಂಡಸ್ಟ್ರಿ ನಡೆಸುತ್ತಿದ್ದಾರೋ ಅವರು ಬಹಳವಾಗಿ ಬೆಳೆಸುತ್ತಿದ್ದಾರೆ ಬಿರ್ಲಾರವರು. ಹರಿಹರ ಪಾಲಿಪೈಬರ್ಸ್ ಅವರು ಬಳಸುತ್ತಿದ್ದಾರೆ. ಅವರಿಗೂ ನಮ್ಮ ಸರ್ಕಾರಕ್ಕೂ ಕರಾರು ಮಾಡುತ್ತಲೇ ಇದ್ದಾರೆ. ನಮಗೆ ಕಡಿಮೆ ಬೆಲೆಗೆ ಕೊಡಿ, ನಮಗೆ ಕೂಪೆ ಕೊಟ್ಟುಬಿಡಿ ನಾವು ಬೇಕಾದರೆ ಬೆಳಿಸಿಕೊಳ್ಳುತ್ತೇವೆಂದು ಹೇಳುತ್ತಲೇ ಇದ್ದಾರೆ ಆವರಿಗೆ ಏನಾದರೂ ಅನುಕೂಲ ಮಾಡಿ ಕೊಡುವುದಕ್ಕೋಸ್ಕರವಾಗಿ ಈ ರೀತಿ ಮಾಡಿದ್ದಾರೋ ಏನೋ ನವಂಗೆ ನಮಸ್ಕೆ ಬರುತ್ತಿದೆ. ನೀವು ಹೊಸದಾಗಿ ಬಂದಿರತಕ್ಕಂಥವರು ನಿಮ್ಮ ಮೇಲೆ ನವಂಗೆ ಸಮಸ್ಕೆ ಬಂದಿಲ್ಲ. ಇವರು ಮೇಲೆ ಸಮಸ್ಕೆ ಇವರು ಮೊದಲೇ ಬೆಳಿಸಿಕೊಟ್ಟಿರುವವರು. ಕೂಪೆಯೆಲ್ಲ ಕೊಟ್ಟಿದ್ದಾರೆ. ಈವತ್ತಿನ ದಿವಸ ಇದನ್ನು ಮುಂದುವರಿಸಿಕೊಂಡು ಹೋಗಬೇಕೆಂ ಬು ಇರುತ್ತೀರಾ ಎಂದು ಕೇಳಬೇಕಾಗಿದೆ. ಮಾನ್ಯ ರಂಗಪ್ಪನವರು ಕೇಳಿಸಿಕೊಳ್ಳಲಿಲ್ಲ. ಅವರು ಕೇಳಿಸಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಅವರು ಎದ್ದು ನಿಂತು ಕೊಳ್ಳುತ್ತಿದ್ದರು.

ಆಮೇಲೆ ಎರಡನೆಯದು ಇದು ಮಾತ್ರವಲ್ಲ ಒಂದು ನಿರ್ಣಯ ಇಟ್ಟುಕೊಂಡು I am quoting Sunderlal Bahuguna's press reports. ಈವತ್ತಿನ ದಿವಸ

> "Terming the commercialisation of agriculture as an off-shoot of materialist thinking, he said, ours is a land of hungry millions. Food trees should be raised in preference to industrial raw-materials. Eucalyptus produced neither food nor fodder".
>
> Quoting from Mr. Robert Lamb's 'world without trees' he said,
>
> "the western countries encouraged developing countries to grow eucalyptus and timber because they needed them most to keep their pulp based factories working".

ನೀವು ಪಾಡರ್ ಬರುತ್ತದೆ ಎಂದು ಹೇಳಿದಿರಿ. ಪುಡ್ ಅಂತು ಬರುವುದಿಲ್ಲ, ಪಾಡರ್ ಬರುತ್ತದೆ. ಪಾಡರ್ ಅಂದರೆ ಏನು ಸೌದೆಗೆ ಕಟ್ಟಿಗೆಯಾಗುತ್ತದೆಂದು ಹೇಳಿದ್ದೀರಿ. ಆ ಕಟ್ಟಿಗೆ ಸರಿಯಾಗಿದೆಯೇ, ಜನರಿಗೆ ಬೇಕಾಗುತ್ತದೆಯೇ ಬೇರೆ ಏನಾದರೂ ಇದರ ಬಗ್ಗೆ ರಿಸರ್ಚ್ ನಡೆದಿದೆಯೇ, ಇದರ ಬಗ್ಗೆ ತಜ್ಞರು ಏನಾದರೂ ಅಭಿಪ್ರಾಯವನ್ನು ಕೊಟ್ಟಿದ್ದಾರೆಯೇ, ಇದರಲ್ಲಿ ಎರಡು ವಿಧ ಇರುತ್ತದೆ ಒಳ್ಳೆಯದು ಕೊಟ್ಟಿದ್ದಾರೆಯೇ ಅಥವಾ ಕೆಟ್ಟದು ಇರುತ್ತದೆ. ಅದು ಏನೇ ಇರಲಿ ಮೂರನೆಯದು ಇನ್ನೊಂದು ಪ್ರಶ್ನೆ ಏನು ಬರುತ್ತದೆ ಎಂದರೆ ವಿದೇಶದ್ದನ್ನು ಕೋಟ್‌ಮಾಡಿ ಆದೆಲ್ಲವನ್ನೂ ಹೇಳಿದ್ದಾರೆ. ನಾನು ಅದರ ಬಗ್ಗೆ ಹೋಗುವುದಿಲ್ಲ. ನಾನು ತಮಗೆ ಒಂದು ವಿದೇಶದ ವಿಚಾರವನ್ನು ಹೇಳುವುದಾದರೆ western countries want us to grow eucalyptus trees so that their pulp industries can be helped and survived. Therefore, it is a very serious matter which affects our country·s self-reliance and the good conditions of our country will be shatteren to pieces if this is done.

ಉಪಾಧ್ಯಕ್ಷರು.— ಈಗ ಏನಾಗಬೇಕು ವಿವರಣೆಯನ್ನು ಕೇಳಿಬಿಡಿ.

ಶ್ರೀ ಎಂ. ಎಸ್. ಕೃಷ್ಣನ್ — ಅದನ್ನೇ ಕೇಳುತ್ತಿರುವುದು. ಸನ್‌ಮಾನ್ಯ ಸಚಿವರು ಇದು ಎರಡಕ್ಕೆ ಮಾತ್ರ ವಿವರಣೆಯನ್ನು ಕೊಟ್ಟರೆ ಯೂಕಲಿಪ್ಟಸ್ ಬೇಕಾದಷ್ಟು ಬೆಳೆದುಕೊಳ್ಳಲಿ ನಮದೇನು ಹೋಗಬೇಕು.

ಶ್ರೀ ಸಿ. ಬೈರೇಗೌಡ — ಮಾನ್ಯ ಅಧ್ಯಕ್ಷರೇ ಕೋಲಾರ ಜಿಲ್ಲೆಯ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಈಗ ವ್ಯವಸಾಯ ಹೇಗೆ ಆಗೆದೆ ಎಂದರೆ ರಾಗಿ ಏನಾದರೂ ಬೇಸಾಯ ಮಾಡಿದರೆ ಈವತ್ತು ನಮ್ಮ ಜಿಲ್ಲೆಯ ರೈತರಿಗೆ ಏನು ಉಳಿತಾಯವಾಗುತ್ತಿಲ್ಲ. ಆದಕ್ಕೋಸ್ಕರವಾಗಿ ಯೂಕಲಿಪ್ಟಸ್ ಬೆಳೆದರೆ ಹೆಚ್ಚು ಲಾಭದಾಯಕವಾಗಿದೆ ಎಂದು ಎಲ್ಲರೂ ಅದನ್ನು ಬೆಳೆಯುತ್ತಿದ್ದಾರೆ. ರೈತರು ಬೆಳೆದಂಥ ಬೆಳೆಗೆ ಯೋಗ್ಯವಾದ ಬೆಲೆಯನ್ನು ಕೊಟ್ಟರೆ ಯೂಕಲಿಪ್ಟಸ್ ಬೆಳೆಯುವುದನ್ನು ಬಿಟ್ಟು ಆಹಾರ ಧಾನ್ಯಗಳನ್ನು ಬೆಳೆಯುತ್ತಾರೆಂದು ಸಭೆಯ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ವಿವರ ಕೊಟ್ಟಿದ್ದಾರೆ, ತಂತ್ರಜ್ಞರು ತಿಂಕ್‌ಟ್ಯಾಂಕ್ ಎಂದು ನಮ್ಮ ರಾಜ್ಯದಲ್ಲಿ ಮಾಡಿದ್ದಾರೆ. ಯಾರನ್ನು ಮಾಡಿದ್ದೀರಿ ಅವರಿಗಿಂದರೂ ಒಪ್ಪಿಸಿ, ಅವರು ವರದಿ ಕೊಟ್ಟಿ ಮೇಲೆ ಇದರ ಬಗ್ಗೆ ಮುಂದೆ ಹೋಗೋಣ.

ಉಪಾಧ್ಯಕ್ಷರು.—ಸಮಿತಿಯನ್ನು ಮಾಡಿರುತ್ತಾರೆಂದು ಹೇಳುತ್ತಿದ್ದಾರೆ, ಇದು ಗಮನ ಸೆಳೆಯುವ ಸೂಚನೆ.....

ಶ್ರೀ ಕೆ.ಎಚ್. ರಂಗನಾಥ್.–ನಾನು ಪ್ರೆಸ್ ಮಾಡುವುದಕ್ಕೆ ಹೋಗುವುದಿಲ್ಲ. ನಿನ್ನೆ ಅವರು ಒಂದು ವಿಷಯ ಹೇಳಿದ ಮೇಲೆ it becomes the property of the House. ನಾನು ಆ ಸಮಿತಿಯಲ್ಲಿ ಇದ್ದವನು ನಾನು ಒಬ್ಬನೇ ಅಲ್ಲದೇ ಮಾನ್ಯ ದೇವೇಗೌಡರು ಇದ್ದರು, ಮಾನ್ಯ ಬೊಮ್ಮಾಯಿಯವರು ಇದ್ದರು. ನಮ್ಮ ಜೊತೆಗೆ ಸದಸ್ಯರಾಗಿದ್ದವರು ಒಬ್ಬರು ವೆಂಕಟಗಿರಿಯಪ್ಪನವರು ಬಂದರು, ಅವರು ಮಾತನಾಡುತ್ತಾ ರಾಗಿ ಬೆಳೆಯತಕ್ಕಂಥ ಏರಿಯಾ ಏನು ಇದೆ ನಮ್ಮ ತುಮಕೂರನ್ನೇ ತೆಗೆದುಕೊಂಡರೆ, ಕೋಲಾರ ಈ ಭಾಗಗಳಲ್ಲಿ ಕೆಲವು ಜನರ ಯೂಕಲಿಪ್ಟಸ್ ಬೆಳೆಯತಕ್ಕಂಥದ್ದು ಜಾಸ್ತಿಯಾಗಿದೆ. ರಾಗಿಯನ್ನು ಬೆಳೆಯಂತಕ್ಕಂಥದ್ದು ಕಡಿಮೆಯಾಗಿದೆ. ಡೆವಲಪ್‌ಮೆಂಟ್ ನೇಷನ್‌ನಲ್ಲಿ ಈ ರೀತಿಯಾದರೆ ಎಷ್ಟು ಕಷ್ಟವಾಗುತ್ತದೆ ಇದನ್ನು ಏತಕ್ಕೆ ಯೋಚನೆ ಮಾಡುತ್ತಿಲ್ಲವೆಂದು ಹೇಳಿದರು. ಇಲ್ಲಿ ಮಾನ್ಯ ಬೈರೇಗೌಡರು ಯೂಕಲಿಪ್ಟಸ್ ಬಿಟ್ಟು ರಾಗಿ ಬೆಳೆಯುತ್ತಿದ್ದಾರೆಂದು ಹೇಳುತ್ತಿದ್ದಾರೆ ಅವರ ಜಿಲ್ಲೆಯವರೇ ಬಂದು ಯೂಕಲಿಪ್ಟಸ್ ಬೆಳೆಯತಕ್ಕಂಥದ್ದು ಜಾಸ್ತಿಯಾಗಿದೆ, ರಾಗಿ ಬೆಳೆಯತಕ್ಕಂಥದ್ದು ಏರಿಯಾ ಕಡಿಮೆಯಾಗಿದೆ ಎಂದು ಹೇಳಿದ್ದಾರೆ. ಹೀಗೆ ಕಡಿಮೆಯಾಗುತ್ತಿದ್ದರೆ ಎಲ್ಲಿ ಹೋಗಬೇಕು ಎನ್ನುವ ಪ್ರಶ್ನೆ ಕೂಡ ಬರುತ್ತದೆ. ಈ ವಿಷಯದಲ್ಲಿ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ ಎಲ್ಲರಿಗೂ ಅವಕಾಶವನ್ನು ಕೊಡುತ್ತೀರಿ ನಮಗೆ ಏತಕ್ಕೆ ಅವಕಾಶವನ್ನು ಕೊಡುವುದಿಲ್ಲ ನಾವು ಏನು ಮಾತನಾಡಬಾರದೆ. ಎಲ್ಲರಿಗೂ ಅವಕಾಶವನ್ನು ಕೊಡಿ.

ಉಪಾಧ್ಯಕ್ಷರು.—ಸ್ವಾಮಿ ರೂಲ್ ನೀವೇ ಮಾಡಿದ್ದೀರಿ. ನೀವು ಸಹ ಗಮನ ಸೆಳೆಯುವ ಸೂಚನೆಯನ್ನು ಕೊಡಿ ನಿಮಗೂ ಅವಕಾಶ ಕೊಡುತ್ತೇನೆ.

ಶ್ರೀ ರಮೇಶ್ ಜಗಜಿಣಗಿ.—ಮಾನ್ಯ ಸದಸ್ಯರು ಅನೇಕ ಪ್ರಶ್ನೆಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ ಈಗ ನಮ್ಮ ಕರ್ನಾಟಕ ರಾಜ್ಯದಲ್ಲಿ, ಯೂಕಲಿಪ್ಟಸ್ ಹೈಬ್ರೀಡ್ ಬೆಳೆಯುತ್ತಿದ್ದಾರೆ. ನಾನು ಮೊದಲೇ ಹೇಳಿದ ಹಾಗೆ ಇದರಲ್ಲಿ ಆರನೂರ ಮೂವತ್ತು ವೆರೈಟಗಳು ಇದೆ. ಇದರಲ್ಲಿ ಮೂರು ಫುಟ್ ಮೇಲೆ ಹೋಗುವುದಿಲ್ಲ ಅಂಥ ವೆರೈಟಿ ಕೂಡ ಇದೆ

ಶ್ರೀ ಎಂ. ಎಸ್. ಕೃಷ್ಣನ್.—ನೀವು ಯೂಕಲಿಪ್ಟಸ್ ಬೆಳೆಸಿದ್ದೀರಾ.

ಶ್ರೀ ರಮೇಶ್ ಜಗಜಿಣಗಿ.—ಇಲ್ಲ ನಾನು ಕಾಫಿ ಬೆಳೆಯುತ್ತಿದ್ದೇನೆ. ಕೆಲವರು ಹೇಳಿಕೆಯ ಆಧಾರದ ಮೇಲೆ ಹೇಳುತ್ತಿದ್ದೇನೆ. ವಾದ ವಿವಾದಗಳನ್ನು ಮಾಡುತ್ತಿದ್ದರೆ ಜೇಕಾದಷ್ಟು ಇದೆ. ಆದರೆ ಪ್ರಶ್ನೆ ಏನೆಂದರೆ ಅವರು ಹೇಳಿದರು ನೀಲಗಿರಿ ಮರವನ್ನು ಬೆಳೆಯುವುದು ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ತಯಾರು ಮಾಡಲಿಕ್ಕೆ ಪ್ರೋತ್ಸಾಹವನ್ನು ಕೊಡುತ್ತಿದ್ದೀರಿ, ಕೈಗಾರಿಕೋದ್ಯಮಗಳು ಬೆಳೆಯಲಿಕ್ಕೆ ಪ್ರೋತ್ಸಾಹವನ್ನು ಕೊಡುತ್ತಿದ್ದೀರಿ ಎಂದು ಹೇಳಿದರು. ೪,೦೫,೮೦,೦೦೦ ಟನ್ ನೀಲಗಿರಿಯ ಬೇಕಾಗಿದ್ದರೂ ಅಷ್ಟನ್ನೂ ಕೊಡಲಿಕ್ಕೆ ಆಗುತ್ತಿಲ್ಲ. ನಮಗೆ ಬಹಳ ಮುಖ್ಯವಾಗಿ ಕಟ್ಟಿಗೆಗೆ ಅವಶ್ಯಕವಾಗಿ ಬೇಕಾಗಿರುತ್ತದೆ. ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ ಈ ನೀಲಗಿರಿ ಮರಗಳು ಬಹಳ ಶೀಘ್ರವಾಗಿ ಬೆಳೆಯುತಕ್ಕಂಥ ಮರಗಳು. ಹೆಚ್ಚು ಕಡಿಮೆ ೮೦ ಲಕ್ಷ ಟನ್ ಉರುವಲು ಕಟ್ಟಿಗೆಗೆ ಬೇಕಾಗುತ್ತದೆ. ಅರಣ್ಯ ಇಲಾಖೆಯಲ್ಲಿ ಹಿಂದೆ ಅಗ್ರಿಮೆಂಟ್ ಆಗಿರುತ್ತದೆ. ಆದರೆ ನಮ್ಮ ಸರ್ಕಾರದವರು ಏನು ವಿಚಾರ ಮಾಡಿದ್ದಾರೆಂದರೆ ಡಿ ಪಿ ಎ.ಪಿ ಮತ್ತು ಎಂ.ಆರ್.ಪಿ.ಪಿ. ಮತ್ತಿತರ ಸಾಮಾಜಿಕ ಪರಿಕರಗಳನ್ನು ಜನತೆಗೆ ಒದಗಿಸಲು ಅರಣ್ಯ ಇಲಾಖೆಯಲ್ಲಿ ಬರತಕ್ಕಂಥ ಕಟ್ಟಿಗೆಯನ್ನು ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಯೂಕಲಿಪ್ಟಸ್ ಎಲ್ಲಿ ಕಡಿಮೆ ಮಳೆ ಬೀಳುತ್ತದೋ, ೨೦–೩೦ ಇಂಚು ಗಿಂತಲೂ ಮಳೆ ಬೀಳುತ್ತದೊ, ಅಲ್ಲಿ ಇದನ್ನು ಬೆಳೆಯಲು ಪ್ರಯತ್ನ ಮಾಡಿರುತ್ತೇವೆ. ಹರಿಯಾಣ, ಉತ್ತರ ಪ್ರದೇಶಗಳಲ್ಲಿ ಒಂದು ಟನ್‌ಗೆ ಒಂದು ಸಾವಿರ ರೂಪಾಯಿ ಬೆಳೆಯಿರುತ್ತದೆ. ಅದು ಆರ್ಥಿಕ ವ್ಯವಸ್ಥೆಗೂ ಕೂಡ ಒಂದು ಬದಲಾವಣೆಯನ್ನು ಕೊಡತಕ್ಕಂಥದ್ದಾಗಿರುತ್ತದೆ. ಆದ್ದರಿಂದ ನಮ್ಮ ಕರ್ನಾಟಕ ರಾಜ್ಯದಲ್ಲೂ ಕೂಡ ಎಲ್ಲ ರೈತರ ಆರ್ಥಿಕ ಪ್ರವಸ್ಥೆಯನ್ನು ಬದಲಾವಣೆ ಮಾಡುವುದಕ್ಕಾಗಿ ಯೂಕಲಿಪ್ಟಸ್‌ನ್ನು ಬೆಳೆಯುವುದರಿಂದ ತುಂಬಾ ಸಹಾಯವಾಗುತ್ತದೆಂದು ಹೇಳಬಯಸುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

೧೯೮೩–೮೪ನೇ ಸಾಲಿನ ಬೇಡಿಕೆಗಳ ಮೇಲೆ ಚರ್ಚೆ

† ಶ್ರೀ ಹನುಮಂತರಾವ್ ದೇಸಾಯಿ (ಆಫ್ಜಲ್‌ಪುರ್). —ಮಾನ್ಯ ಅಧ್ಯಕ್ಷರೆ,ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಬೆಂಬಲಿಸುತ್ತಾ ನಾನು ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಈ ಇಲಾಖೆ ಬಹಳ ಮಹತ್ವವಾದಂಥ ಮತ್ತು ಮುಖ್ಯವಾದಂಥ ಇಲಾಖೆ ಎಂಬುದು ಪ್ರತಿಯೊಬ್ಬರಿಗೂ ಗೊತ್ತಿದೆ ಇಂತಹ ಒಂದು ಮುಖ್ಯವಾದಂಥ ಇಲಾಖೆ ಈ ಹಿಂದಿನ ಸರ್ಕಾರದಲ್ಲಿ ಭ್ರಷ್ಟಾಚಾರದ ಕೇಂದ್ರವಾಗಿತ್ತು ಎಂದು ಕರ್ನಾಟಕದ ಜನರು ಮಾತನಾಡಿಕೊಳ್ಳುತ್ತಿದ್ದಾರೆ. ವರ್ಗಾವರ್ಗಿ ವಿಚಾರದಲ್ಲಿ ಜೂನಿಯರ್ ಇಂಜಿನಿಯರ್‌ಗಾದರೆ ಇಷ್ಟು, ಅಸಿಸ್ಟೆಂಟ್ ಇಂಜಿನಿಯರ್‌ಗಾದರೆ ಇಷ್ಟು, ಎಕ್ಸಿಕ್ಯುಟಿವ್ ಇಂಜಿನಿಯರ್‌ಗಾವರೆ ಇಷ್ಟು. ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಾವರೆ ಇಷ್ಟು ದುಡ್ಡು ಕೊಡಲೇ ಬೇಕೆಂದು ನಿಗದಿ ಮಾಡಿದ್ದರೆಂದು ಕರ್ನಾಟಕದ ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಮಾನ್ಯ ದೇವೇಗೌಡರು ಈ ಇಲಾಖೆಯ ಮಂತ್ರಿಯಾದ ಮೇಲೆ ಈ ಕಷ್ಟದ ಇಲಾಖೆಯನ್ನು ಶುದ್ಧೀಕರಿಸಲು ಮತ್ತು ಭ್ರಷ್ಟಾಚಾರ ಇಲ್ಲದಂತೆ ಮಾಡಲು ಹಾಗೂ ಅಲ್ಲಿನ ಎಲ್ಲ ಕಾರ್ಯಗಳನ್ನು ಚುರುಕುಗೊಳಿಸಲು ಇತ್ತೀಚೆಗೆ ಕೆಲವು ವರ್ಗಾವರ್ಗಿಗಳನ್ನು ಏನು ಮಾಡಿದ್ದಾರೆ. ಅದನ್ನು ಕರ್ನಾಟಕದ ಜನತೆ ಸ್ವಾಗತಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಆದರ್ಶವಾದಂಥ, ಸ್ವಚ್ಛವಾದಂಥ